# ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಚಿಕ್ಕಬಳ್ಳಾಪುರ, ಕಾರ್ಯಸ್ಥಾನ ಚಿಂತಾಮಣಿ.

## ಎಸ್.ಸಿ. ನಂಃ 03/2023

| | | | |
|---|---|---|---|
| **ಸಾಕ್ಷಿದಾರರ ಹೆಸರುಃ** | ವಿಜಯಕುಮಾರ್ | ಪ್ರಾಸಾಃ | 17 |
| **ತಂದೆಯ ಹೆಸರುಃ** | ವಿಶ್ವನಾಥ | ಚಾಸಾಃ | 19 |
| **ವಯಸ್ಸುಃ** | 30 | ಪ್ರಮಾಣ ವಚನ ಭೋದಿಸಿದ ದಿನಾಂಕ | 23.07.2025 |
| **ಉದ್ಯೋಗಃ** | ಖಾಸಗಿ | | |
| **ವಾಸ ಸ್ಥಳಃ** | ಚಿಂತಾಮಣಿ | | |

**ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ**

ನಾನು ಆರೋಪಿತರನ್ನು ನೋಡಿಲ್ಲ. ಈಗ ತೋರಿಸಿದ ಮಹಜರ್ ನಲ್ಲಿರುವ ಸಹಿ ನನ್ನದು. ಅದನ್ನು ನಿಪಿ-12, ನಿಪಿ-13 ಮತ್ತು ನಿಪಿ-14 ಎಂದು ಈಗಾಗಲೇ ಗುರುತಿಸಲಾಗಿದೆ. ಸಹಿಯನ್ನು ನಿಪಿ-12 ಸಿ , ನಿಪಿ-13 ಸಿ ಮತ್ತು ನಿಪಿ-14 ಬಿ ಎಂದು ಗುರುತಿಸಲಾಯಿತು. 3 ವರ್ಷದ ಹಿಂದೆ ನನ್ನ ಬಿ.ಎಸ್.ಎನ್.ಎಲ್ ಕಚೇರಿಗೆ ಹೋಗಿದ್ದು ಠಾಣೆಗೆ ಹೋಗಿದ್ದು ಅಲ್ಲಿ ಪೋಲಿಸರು ಸದರಿ ಸಹಿ ಪಡೆದರು. ಯಾವ ಕಾರಣಕ್ಕೆಂದು ಗೊತ್ತಿಲ್ಲ. ಅಲ್ಲಿ ಯಾವುದೇ ರಕ್ತಸಿಕ್ತ ಬಟ್ಟೆ ನೋಡಿಲ್ಲ.

**(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅಭಿಯೋಜಕರು ಅನುಮತಿ ಕೇಳಿದ್ದಾರೆ. ಅನುಮತಿ ನೀಡಲಾಗಿದೆ)**

**ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ**

ದಿ.06.10.2022 ರಂದು ಸರ್ವೇ.ನಂ.22 ರ ಜಮೀನಿನಲ್ಲಿ ಆರೋಪಿತರು ಕೃತ್ಯ ನಡೆಸಿದ ಸ್ಥಳ ಎಂದು ಗುರುತಿಸಿದ ಮೇರೆಗೆ ನಿಪಿ-12 ರಿಂದ ನಿಪಿ-14 ರವರೆಗೆ ಮಹಜರ್ ಜರುಗಿಸಿದ್ದು ನಂತರ ಅದೇ ದಿನ ಕರಿದಪ್ಪ ರವರ ವಾಸದ ಮನೆಯ ಬಳಿ 4 ನೇ ಆರೋಪಿ ರಕ್ತ-ಸಿಕ್ತ ಬಟ್ಟೆ ಹಾಗೂ ಮೊಬೈಲ್ ಹಾಜರುಪಡಿಸಿದಾಗ ಪಂಚಾನಾಗಿ ಸಹಿ ಮಾಡಿದ್ದರೂ ಸಹ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನೀಡುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದ ಪಾಟೀ ಸವಾಲು ಏನು ಇರುವುದಿಲ್ಲವೆಂದು ತಿಳಿಸಿದ್ದಾರೆ.**

**ಮರು ವಿಚಾರಣೆಃ ...... ಇಲ್ಲ ......**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು) ಓ.ಹೇ.ಕೇ. ಸರಿ ಇದೆ.

ಸಹಿ/-

ದಿಃ 23.07.2025
ಸ್ಥಳಃ ಚಿಂತಾಮಣಿ

**(ಕೆ.ಎಂ.ರಾಜಶೇಖರ)**
ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಬಳ್ಳಾಪುರ, ಕಾರ್ಯಸ್ಥಾನ ಚಿಂತಾಮಣಿ.